# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 357 |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11–12–2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೀದರ್ ಜಿಲ್ಲೆ ಹುಮನಾಬಾದ್ ಪಟ್ಟಣದ ಅಂಬೇವಾಡಿ ಬೇಮಲಕೇಡಾ ನಡುವಿನ ಸುಮಾರು 1.00 ಕಿ.ಮೀ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಯಾವಾಗ ಟೆಂಡರ್ ಕರೆಯಲಾಗಿದೆ; ಈ ಕಾಮಗಾರಿ ಒಟ್ಟು ಮೊತ್ತವೆಷ್ಟು; | ಬೀದರ್ ಜಿಲ್ಲೆಯ ಹುಮನಾಬಾದ್ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನೂತನ ರಾಜ್ಯಹೆದ್ದಾರಿ ಅಂಬೇವಾಡಿದಿಂದ ಬೇಮಳಖೇಡಾ ವರೆಗೆ ರಸ್ತೆ ಕಿ.ಮೀ.46.74 ರಿಂದ 47.44 ವರೆಗೆ ರಸ್ತೆ ಸುಧಾರಣೆ ಕಾಮಗಾರಿಯ ಅಂದಾಜು ಮೊತ್ತ ರೂ:500.00 ಲಕ್ಷಗಳಿಗೆ ಮಂಜೂರಾಗಿರುತ್ತದೆ. ಈ ಕಾಮಗಾರಿಯ ಟೆಂಡರನ್ನು ದಿನಾಂಕ:17.08.2024 ರಂದು ಕರೆಯಲಾಗಿದೆ. |
| ಆ) | ಈ ಟೆಂಡರ್ ಪ್ರಕ್ರಿಯೆ ಈಗ ಯಾವ ಹಂತದಲ್ಲಿದೆ; ಕಾಮಗಾರಿಯನ್ನು ಪಡೆದುಕೊಂಡಿರುವ ಗುತ್ತಿಗೆದಾರರು ಯಾರು; (ಹೆಸರು ವಿವರಗಳನ್ನು ನೀಡುವುದು) | ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ: 25.10.2024 ರಂದು ಪೂರ್ಣಗೊಳಿಸಲಾಗಿದ್ದು, ಎಲ್–1 ದರ ನಮೂದಿಸಿದ ಶ್ರೀ ಶುಭಂ ವೀರಶೆಟ್ಟಿ ರಾಠೋಡ್, ಪ್ರಥಮ ದರ್ಜೆ ಗುತ್ತಿಗೆದಾರರು, ರವರ ಆರ್ಥಿಕ ಬಿಡ್‌ಗೆ ದಿನಾಂಕ:25.10.2024 ರಂದು ಅನುಮೋದನೆ ನೀಡಲಾಗಿದೆ. ದಿನಾಂಕ:11.11.2024 ರಂದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದೆ. |
| ಇ) | ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳದಿದ್ದರೂ ದಿನಾಂಕ: 17.09.2024 ರಂದು ಗುತ್ತಿಗೆದಾರರು ನೆರವೇರಿಸಿರುವುದು ನಿಜವೇ; | ಕಾಮಗಾರಿಯ ಕಾರ್ಯಾದೇಶ ನೀಡಿದ ದಿನಾಂಕ 11.11.2024 ರ ಮುಂಚಿತವಾಗಿ ಅಥವಾ ದಿನಾಂಕ:17.09.2024 ರಂದು ಸದರಿ ಕಾಮಗಾರಿಗೆ ಯಾವುದೇ ಭೂಮಿ ಪೂಜೆ ಅಥವಾ ಅಡಿಗಲ್ಲು ಸಮಾರಂಭ ನೆರವೇರಿಸಿರುವುದಿಲ್ಲ. ಆದ್ದರಿಂದ ಗುತ್ತಿಗೆದಾರರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಅಥವಾ ಗುತ್ತಿಗೆದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸುವುದು ಹಾಗೂ ತನಿಖೆ ನಡೆಸುವ ಅಗತ್ಯವಿರುವುದಿಲ್ಲ. |
| ಈ) | ಹಾಗಿದ್ದಲ್ಲಿ, ನಿಯಮಾನುಸಾರ ಕಾಮಗಾರಿ ಕೈಗೊಳ್ಳಬಾರದೆಂದು ತಿಳಿದಿದ್ದರೂ ಸಹ ಈ ಪ್ರಕರಣದಲ್ಲಿ ಮುಂಚಿತವಾಗಿ ಕಾಮಗಾರಿ ಭೂಮಿಯ ಪೂಜೆಯನ್ನು ನೆರವೇರಿಸಿರುವುದರಿಂದ ಸಂಬಂಧಪಟ್ಟ ಸದರಿ ಗುತ್ತಿಗೆದಾರರ ಮೇಲೆ ಯಾವುದೇ ಶಿಸ್ತಿನ ಕ್ರಮ ಕೈಗೊಳ್ಳದಿರಲು ಕಾರಣವೇನು; | |
| ಉ) | ಸರ್ಕಾರವು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸದರಿ ಗುತ್ತಿಗೆದಾರರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು ಇವರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿ ಈ ಕಾಮಗಾರಿಗಳ ಕುರಿತು ಸಮಗ್ರ ತನಿಖೆ ನಡೆಸಲು ಆದೇಶಿಸುವುದೇ? | |

ಸಂಖ್ಯೆ: ಲೋಇ 145 ಸಿಐಎಸ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು